**ಬಿ.ಬಿ.ಎಂ.ಪಿ ಮಹದೇವಪುರವಲಯ, ವಾರ್ಡ್ ನಂ. 52, ಕೆ.ಆರ್ ಪುರ, ದಿ:20/02/2019 ರಂದು ನಡೆದ ವಾರ್ಡ್ ಸಮಿತಿ ಸಭೆಯ ನಡಾವಳಿಗಳು**

******

ಸಭೆಯಲ್ಲಿ ಹಾಜರಿದ್ದ ಸದಸ್ಯರುಗಳು

ಶ್ರೀಮತಿ. ಕೆ. ಪೂರ್ಣಿಮಾ,
ಶ್ರೀಮತಿ. ಉಮಾಸಂತೋಷ್
ಶ್ರೀಮತಿ. ದೇವಿ, ಟಿ.ಎಸ್
ಶ್ರೀಮತಿ. ರಶ್ಮಿ ಪಾಟೀಲ್
ಶ್ರೀ. ಶೇಖರ್
ಶ್ರೀ. ಪುರುಷೋತ್ತಮ್
ಶ್ರೀ. ಕೇಶವಮೂರ್ತಿ

ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು

ಶ್ರೀ. ಜಗದೀಶ ಎಂ, ವಾರ್ಡ್ 52, ಸಹಾಯಕ ಅಭಿಯಂತರರು
ಶ್ರೀ. ದಿನೇಶ್, ಸಹಾಯಕ ಅಭಿಯಂತರರು (ಬೆಂಗಳೂರು ಜಲಮಂಡಳಿ)
ಶ್ರೀ. ಮುಕುಂದಪ್ಪ, ಹಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ನಂ. 52

ದಿ:20/02/2019 ರಂದು ಕೆ.ಆರ್‌ಪುರ ವಿಧಾನಸಭಾ ಕ್ಷೇತ್ರದ ಬಿ.ಬಿ.ಎಂ.ಪಿ ಮಹದೇವಪುರ ವಲಯದ ವಾರ್ಡ್ ನಂ. 52, ಕೆ.ಆರ್ ಪುರದ ವಾರ್ಡ್ ಸಮಿತಿ ಸಭೆಯನ್ನು ಮಾನ್ಯ ಅಧ್ಯಕ್ಷರು, ವಾರ್ಡ್‌ಸಮಿತಿ ಮತ್ತು ಬಿ.ಬಿ.ಎಂ.ಪಿ ಸದಸ್ಯರಾದಂತಹ ಶ್ರೀಮತಿ. ಕೆ. ಪೂರ್ಣಿಮಾಶ್ರೀನಿವಾಸ & ವಾರ್ಡ್‌ಸಮಿತಿ ಕಾರ್ಯದರ್ಶಿಗಳ ಸಮ್ಮುಖದಲ್ಲಿ ನಡೆಸಲಾಯಿತು.

ವೆಂಗಯ್ಯನಕೆರೆ ಹಿಂಭಾಗದ ಮೀನಾಕ್ಷಿ ದೇವಸ್ಥಾನದ ಪಕ್ಕದಲ್ಲಿ ಹರಿಯುವ ರಾಜಕಾಲುವೆಯ ಪಕ್ಕ ಪಾರ್ಕ್ ಜಾಗದ ಹತ್ತಿರ ಲಭ್ಯವಿರುವ ಸ್ಥಳದಲ್ಲಿ ಕಸದ ಕಿಯೋಸ್ಕ್ ಘಟಕವನ್ನು ಸ್ಥಾಪಿಸಿ, ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಬೇಕೆಂದು ವಾರ್ಡ್ ಸದಸ್ಯರಾದ ಶ್ರೀ ಪುರುಷೋತ್ತಮ್ ಮತ್ತು ಸುಕುಮಾರ್ ರವರು ಕೋರಿದರ ಮೇರೆಗೆ ಸಭೆಯಲ್ಲಿ ಇದರ ಸಾಧಕ ಭಾದಕಗಳನ್ನು ಕೊಯೋಸ್ಕ್ ಸಂಸ್ಥೆಯವರೊಡನೆ ಚರ್ಚಿಸಿ ಕ್ರಮವಹಿಸುವಂತೆ ಶ್ರೀ. ಎಂ. ಜಗದೀಶ, ವಾರ್ಡ್ ಇಂಜಿನಿಯರ್ ಮತ್ತು ಶ್ರೀ. ಮುಕುಂದಪ್ಪ, ಹಿರಿಯ ಆರೋಗ್ಯ ಪರಿವೀಕ್ಷಕರಿಗೆ ಕ್ರಮ ವಹಿಸುವಂತೆ ಹಿಂದಿನ ಸಭೆಯಲ್ಲಿ ತಿಳಿಸಿದಂತೆ ಆರೋಗ್ಯ ಪರಿವೀಕ್ಷಕರು ಖುದ್ದಾಗಿ ಲಭ್ಯವಿರುವ ಲೋಕಲ್ ಮೆಟೀರಿಯಲ್ ಉಪಯೋಗಿಸಿಕೊಂಡು ಕ್ರಮ ವಹಿಸಲಾಗಿದ್ದು, ಕೆಲಸವು ಪ್ರಗತಿಯಲ್ಲಿರುತ್ತದೆ.

ಕೆ.ಆರ್ ಪುರ ಪ್ರಥಮದರ್ಜೆ ಕಾಲೇಜಿನ ಆವರಣದಲ್ಲಿ ಲೈಬ್ರರಿ ಕಟ್ಟಡದ ಕೆಲಸ ಪ್ರಾರಂಭಿಸಲಾಗಿದ್ದು, ಕಾಲೇಜಿನ ಪ್ರಾಂಶುಪಾಲರಿಗೆ ಲೈಬ್ರರಿ ಕಟ್ಟಡದ ಬಗ್ಗೆ ದಿನಾಂಕ:09/12/2018 ರಲ್ಲಿ ಬಿ.ಬಿ.ಎಂ.ಪಿ ವತಿಯಿಂದ ಪತ್ರ ಬರೆದ ಬಗ್ಗೆ ಗಮನ ಸೆಳೆದು ಪ್ರಾಂಶುಪಾಲರೊಡನೆ ಚರ್ಚಿಸಿ ಕ್ರಮ ಕೈಗೊಳ್ಳುವಂತೆ ದಿ:06/12/2018 ರ

Scanned by CamScanner

ಸಭೆಯ ಬಗ್ಗೆ ಗಮನ ಸೆಳೆಯುತ್ತಾ ಇದುವರೆಗೂ ಯಾವುದೇ ಪ್ರಗತಿ ಆಗದಿರುವುದನ್ನು ಗಮನಿಸಿ ಸಭೆಯ ಸದಸ್ಯರು ಆಕ್ಷೇಪ ವ್ಯಕ್ತ ಪಡಿಸಿದ್ದು, ಈಗಾಗಲೇ ಪಿಲ್ಲರುಗಳನ್ನು ಕಟ್ಟಿರುವುದು ಗಮನಿಸಿ ಯಾವುದೇ ಆರ್ಥಿಕ ಪೋಲಾಗದಂತೆ ಅದೇ ಸ್ಥಳದಲ್ಲಿಯೇ ಲೈಬ್ರರಿ ಕಟ್ಟಡವನ್ನು ನಿರ್ಮಿಸುವಂತೆ ಸಭೆಯಲ್ಲಿ ನಿರ್ಣಯಿಸಲಾಯಿತು. ಅದರಂತೆ ಕ್ರಮ ಕೈಗೊಂಡು ಕಾಮಗಾರಿಯನ್ನು ಪೂರ್ಣಗೊಳಿಸಲು ಕ್ರಮ ವಹಿಸುವಂತೆ ಸಭೆಯಲ್ಲಿ ಹಾಜರಿದ್ದ ಇಂಜಿನಿಯರ್‌ರವರಿಗೆ ಸೂಚಿಸಿದ ಮೇರೆಗೆ ಒಂದು ದಿನಾಂಕವನ್ನು ನಿಗದಿಪಡಿಸಿ ಕೂಲಂಕುಷವಾಗಿ ಆಡಳಿತ ಮಂಡಳಿಯೊಡನೆ ಚರ್ಚಿಸಲು ಕ್ರಮ ವಹಿಸಲಾಗುತ್ತಿದೆ.

ಶಟಲ್ ಬ್ಯಾಟ್‌ಮಿಂಟನ್ ಕೋರ್ಟಿಗೆ ಒಬ್ಬ ನುರಿತ ಟ್ರೈನರ್ ನೇಮಿಸಿ ತಿಂಗಳಿಗೆ ಪ್ರತಿಯೊಬ್ಬರಿಗೂ ರೂ. 400/ ಪ್ರತಿ ಮಾಹೆಗೆ ಒಂದು ದಿನದಲ್ಲಿ ಒಂದು ಗಂಟೆಗೆ ಮಾತ್ರ ಅವಕಾಶ ನೀಡುವಂತೆ ಕಾನೂನುರೀತ್ಯ ಕ್ರಮವಹಿಸಲು ಇಂಜಿನಿಯರ್ ರವರಿಗೆ ಸೂಚಿಸಲಾಯಿತು. ಶಟಲ್ ಬ್ಯಾಟ್‌ಮಿಂಟನ್ನಿಗೆ ಸಿ.ಸಿ.ಟಿ.ವಿ ಮತ್ತು ಜನರೇಟರನ್ನು ಅಳವಡಿಸಲು ಕ್ರಮ ಕೈಗೊಳ್ಳುವಂತೆ ಸೂಚಿಸಲಾಯಿತು. ಅನುದಾನದ ಲಭ್ಯತೆಯ ಅನುಗುಣವಾಗಿ ಕ್ರಮ ಕೈಗೊಳ್ಳುವುದಾಗಿ ಸಭೆಗೆ ತಿಳಿಸಿದರು.

ಟಿ.ಸಿ ಪಾಳ್ಯ ತಿರುವಿನಲ್ಲಿ ವಾಹನಗಳು ಅತಿ ವೇಗದಿಂದ ಬಂದು ಅಪಘಾತಗಳು ಹೆಚ್ಚುತ್ತಿರುವ ಕಾರಣ ಒಂದು ಹಂಪನ್ನು ಹಾಕುವಂತೆ ಇಂಜಿನಿಯರ್ ರವರಿಗೆ ತಿಳಿಸಲಾಯಿತು. ಸದರಿ ರಸ್ತೆಯು ರಸ್ತೆ ಮೂಲಭೂತ ಸೌಕರ್ಯ ರವರ ವ್ಯಾಪ್ತಿಗೆ ಬರುತ್ತಿದ್ದು, ಸಂಬಂದಿಸಿದವರೊಡನೆ ಚರ್ಚಿಸಿ ಮುಂದಿನ ಕ್ರಮ ಕೈಗೊಳ್ಳುವುದಾಗಿ ಸಭೆಗೆ ಇಂಜಿನಿಯರ್ ತಿಳಿಸಿದರು.

ಬಿ.ಬಿ.ಎಂ.ಪಿ ಕಾಮಗಾರಿಗಳ ಬಗ್ಗೆ 2017-18 ರ ಪಿ.ಒ.ಡಬ್ಲು ಕಾಮಗಾರಿಗಳ ಅಂದಾಜು ಪಟ್ಟಿ ಮಂಜೂರಾಗಿದ್ದು, ಟೆಂಡರ್ ಕರೆದು ಕಾರ್ಯದೇಶ ನೀಡುವ ಪ್ರಕ್ರಿಯೆಯು ಪ್ರಗತಿಯಲ್ಲಿದೆಯೆಂದು ಸಭೆಗೆ ವಾರ್ಡ್ ಇಂಜಿನಿಯರ್ ತಿಳಿಸಿದರು. ಮುಂದುವರೆದು 2018-19 ನೇ ಸಾಲಿನ ಕಾಮಗಾರಿಗಳ ಪಟ್ಟಿಯನ್ನು ಆಯುಕ್ತರ ಕಚೇರಿಗೆ ನೀಡಲಾಗಿದ್ದು, ಜಾಬ್‌ಕೋಡ್ ನೀಡುವ ಹಂತದಲ್ಲಿದೆಯೆಂದು ಸಭಗೆ ತಿಳಿಸಿದರು. ಪಿ ಕೋಡ್ ಪಿ - 3520 ಮತ್ತು ಪಿ - 3443 ಮತ್ತು 14 ನೇ ಹಣಕಾಸು ಕಾಮಗಾರಿಗಳ ಒಟ್ಟು 4.5 ಕೋಟಿ ವೆಚ್ಚದ ಕಾಮಗಾರಿಗಳಿಗೆ ಜಾಬ್ ಕೋಡ್ ನೀಡಲಾಗಿದ್ದು, ಅಂದಾಜು ಪಟ್ಟಿಗೆ ಆಡಳಿತಾತ್ಮಕ ಮತ್ತು ತಾಂತ್ರಿಕ ಮಂಜೂರಾತಿ ಪ್ರಕ್ರಿಯೆ ಪ್ರಗತಿಯಲ್ಲಿದೆಯೆಂಧು ತಿಳಿಸಲಾಯಿತು.

ಶ್ರೀಮತಿ. ಕೆ. ಪೂರ್ಣಿಮಾ
ಅಧ್ಯಕ್ಷರು, ವಾರ್ಡ್‌ಸಮಿತಿ
ವಾರ್ಡ್ 52, ಕೆ.ಆರ್ ಪುರ

ಶ್ರೀ.ಜಗದೀಶ.ಎಂ,
ಕಾರ್ಯದರ್ಶಿ
ಕೆ.ಆರ್ ಪುರ ವಾ. 52

ಪ್ರತಿಯನ್ನು:-
ಮಾನ್ಯ ಆಯುಕ್ತರು, ಬಿ.ಬಿ.ಎಂ.ಪಿ ಕೇಂದ್ರಕಚೇರಿ, ಬೆಂಗಳೂರು
ಮಾನ್ಯ ಜಂಟಿ ಆಯುಕ್ತರು, ಬಿ.ಬಿ.ಎಂ.ಪಿ ಮಹದೇವಪುರವಲಯ, ಬೆಂಗಳೂರು
ಅಧೀಕ್ಷಕ ಅಭಿಯಂತರರು, ಮಹದೇವಪುರವಲಯ, ಬಿ.ಬಿ.ಎಂ.ಪಿ ಬೆಂಗಳೂರು
ಸಹಾಯಕ ಕಾರ್ಯಪಾಲಕ ಅಭಿಯಂತರರು, (ಫ.ತ್ಯಾ.ನಿ) ಕೆ.ಆರ್ ಪುರ ವಿಭಾಗ, ಬೆಂಗಳೂರು

Scanned by CamScanner